## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಭಿವೃದ್ಧಿ ಆಯುಕ್ತರ ಸಿಬ್ಬಂದಿ ಶಾಖೆಯ ಡ್ರಾಯಿಂಗ್ ಅಧಿಕಾರ ವಹಿಸುವ ಬಗ್ಗೆ

ಓದಲಾಗಿದೆ: ಸರ್ಕಾರದ ಅಧಿಸೂಚನೆ ಸಂಖ್ಯೆ: ಗ್ರಾಅಪ 256 ಪಬವ 2016 ದಿನಾಂಕ:15/12/2016

:-:

ಪ್ರಸ್ತಾವನೆ:

ಶ್ರೀ ಮುಬಾರಕ್ ಅಹ್ಮದ್ ಉಪನಿರ್ದೇಶಕರು ಮತ್ತು ಸರ್ಕಾರದ ಅಧೀನ ಕಾರ್ಯದರ್ಶಿ ಇವರು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಭಿವೃದ್ಧಿ ಆಯುಕ್ತರ ಸಿಬ್ಬಂದಿ ಶಾಖೆಯ ವಿಷಯಗಳು ಹಾಗೂ ಸೇವೆಗಳು ಬಿ ಮತ್ತು ಸಿ ಶಾಖೆಗಳ ನ್ಯಾಯಾಲಯ ಪ್ರಕರಣಗಳು ಮತ್ತಿತರ ಸೇವಾ ವಿಷಯಗಳುನ್ನು ನಿರ್ವಹಿಸುವಂತೆ ಮೇಲೆ ಓದಲಾದ ದಿನಾಂಕ:15/12/2016 ರ ಸರ್ಕಾರದ ಅಧಿಸೂಚನೆಯಲ್ಲಿ ಆದೇಶಿಸಲಾಗಿರುತ್ತದೆ. ಅದರಂತೆ ಸದರಿ ಅಧಿಕಾರಿಯವರು ಮೇಲ್ಕಂಡ ವಿಷಯಗಳನ್ನು ನಿರ್ವಹಿಸುತ್ತಿದ್ದಾರೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಭಿವೃದ್ಧಿ ಆಯುಕ್ತರ ಪರವಾಗಿ ಹಣ ಸೆಳೆಯುವ ಮತ್ತು ಬಟವಾಡೆ ಅಧಿಕಾರಿ (Drawing and Disbursing Officer)" ಜವಾಬ್ದಾರಿಗಳನ್ನು ಪ್ರಸ್ತುತ ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು ಬಿ&ಸಿ) ಇವರು ನಿರ್ವಹಿಸುತ್ತಿದ್ದು, ಸೇವೆಗಳು ಬಿ & ಸಿ ಶಾಖೆಯ ಕೆಲಸದ ಒತ್ತಡ ಹೆಚ್ಚಾಗಿರುವುದರಿಂದ, ಸದರಿ ಡ್ರಾಯಿಂಗ್ ಅಧಿಕಾರಿಯ ಕೆಲಸ ಕಾರ್ಯಗಳನ್ನು ಶ್ರೀ ಮುಬಾರಕ್ ಅಹ್ಮದ್ ಉಪನಿರ್ದೇಶಕರು ಮತ್ತು ಸರ್ಕಾರದ ಅಧೀನ ಕಾರ್ಯದರ್ಶಿ ಇವರಿಗೆ ವಹಿಸಲು ನಿರ್ಧರಿಸಿದೆ, ಆದ್ದರಿಂದ ಈ ಕೆಳಕಂಡ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಗ್ರಾಅಪ 03 ಅಆಸಿ 2017 ಬೆಂಗಳೂರು ದಿನಾಂಕ 17.07.2017**

ಮೇಲೆ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಶ್ರೀ ಮುಬಾರಕ್ ಅಹ್ಮದ್ ಉಪನಿರ್ದೇಶಕರು ಮತ್ತು ಸರ್ಕಾರದ ಅಧೀನ ಕಾರ್ಯದರ್ಶಿ ಇವರು ಈಗಾಗಲೇ ನಿರ್ವಹಿಸುತ್ತಿರುವ ಅಭಿವೃದ್ಧಿ ಆಯುಕ್ತರ ಸಿಬ್ಬಂದಿ ಶಾಖೆಯ ಸೇವಾ ವಿಷಯಗಳು ಹಾಗೂ ಅಭಿವೃದ್ಧಿ ಆಯುಕ್ತರ ಕಛೇರಿಯ ವಿಷಯಗಳನ್ನು ನಿರ್ವಹಿಸುವುದರ ಜೊತೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಭಿವೃದ್ಧಿ ಆಯುಕ್ತರ ಸಿಬ್ಬಂದಿ ಶಾಖೆಯಲ್ಲಿ "ಅಭಿವೃದ್ಧಿ ಆಯುಕ್ತರ ಪರವಾಗಿ" ಹಣ ಸೆಳೆಯುವ ಮತ್ತು ಬಟವಾಡೆ ಅಧಿಕಾರಿಯಾಗಿ (Drawing and Disbursing Officer) ನಿರ್ವಹಿಸಲು ಆದೇಶಿಸಿದೆ.

ಮುಂದುವರೆದು, ಉಪನಿರ್ದೇಶಕರು ಮತ್ತು ಸರ್ಕಾರದ ಅಧೀನ ಕಾರ್ಯದರ್ಶಿ ಇವರು ಅಗತ್ಯವಿದ್ದಲ್ಲಿ ಅನ್ವಯವಾಗುವ ಪ್ರಾಧಿಕಾರಗಳ ಸೂಕ್ತ ಅನುಮೋದನೆಯೊಂದಿಗೆ ಅಭಿವೃದ್ಧಿ ಆಯುಕ್ತರ ಸಿಬ್ಬಂದಿ ಶಾಖೆಯ ವಿಷಯಗಳನ್ನು ಇತ್ಯರ್ಥ ಪಡಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

17/07/2017

(ಎಸ್.ರಂಗನಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಬಿ & ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಉಪ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು
3. ಅಭಿವೃದ್ಧಿ ಆಯುಕ್ತರ ಸಿಬ್ಬಂದಿ ಶಾಖೆ
4. ಶ್ರೀ ಎಸ್ ರಂಗನಗೌಡ, ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು ಬಿ&ಸಿ)
5. ಶ್ರೀ ಮುಬಾರಕ್ ಅಹ್ಮದ್ ಉಪನಿರ್ದೇಶಕರು ಮತ್ತು ಸರ್ಕಾರದ ಅಧೀನ ಕಾರ್ಯದರ್ಶಿ
6. ಶಾಖಾ ರಕ್ಷಕ ಕಡತ: ಹೆಚ್ಚಿನ ಪ್ರತಿ.

ಕರ್ನಾಟಕ ಸರ್ಕಾರ
ನಮೂನೆ ಕೆ.ಎಫ್.ಸಿ.19-(ಅನುಚ್ಛೇದ 100)

**ಪ್ರಭಾರ ವರ್ಗಾವಣೆ ಪ್ರಮಾಣ ಪತ್ರ**

ನಾವು ಈ ದಿನ 19.07.2017ರ ಪೂರ್ವಾಹ್ನ ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 03 ಅಆಸಿ 2017 ದಿನಾಂಕ: 17.07.2017 ರ ಅನುಸಾರವಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಭಿವೃದ್ಧಿ ಆಯುಕ್ತರ ಸಿಬ್ಬಂದಿ ಶಾಖೆಯಲ್ಲಿ "ಅಭಿವೃದ್ಧಿ ಆಯುಕ್ತರ ಪರವಾಗಿ" ಹಣ ಸೆಳೆಯುವ ಮತ್ತು ಬಟವಾಡೆ ಅಧಿಕಾರಿ ಹುದ್ದೆಯನ್ನು ಕ್ರಮವಾಗಿ ಒಪ್ಪಿಸಲಾಗಿದೆ ಮತ್ತು ಪಡೆಯಲಾಗಿದೆ ಎಂದು ಪ್ರಮಾಣೀಕರಿಸುತ್ತೇನೆ.

| | |
|---|---|
| (ಲೆಕ್ಕ ಪರಿಶೋಧನಾ ಕಛೇರಿ ಉಪಯೋಗಕ್ಕಾಗಿ ಮಾತ್ರ)<br>(ಲೆಕ್ಕ ಪರಿಶೋಧನಾ ರಿಜಿಸ್ಟರಿನ ಎ/ಆರ್ ____________ (ಪುಟದಲ್ಲಿ ನಮೂದಿಸಿದೆ)ರಜಾ ಲೆಕ್ಕ ________________ ಪುಟದಲ್ಲಿ ನಮೂದಿಸಿ, ರಜಾ ಸಂಬಳ ಪತ್ರವನ್ನು (ಸೇವಾ ವರದಿಯನ್ನು ____________________ ರಂದು ಕಳುಹಿಸಿಕೊಟ್ಟಿದೆ.<br><br>ಲೆಕ್ಕಪರಿಶೋಧಕ/ಸೂಪರಿಟೆಂಡೆಂಟ್/ಸಹಾಯಕ ಮಹಾಲೇಖಪಾಲರು/ಸಹಾಯಕ ಲೇಖಾಧಿಕಾರಿ<br>ಎ/ಆರ್____________ಪುಟದಲ್ಲಿ ನಮೂದಿಸಿದೆ.<br>ರಜ ಲೆಕ್ಕ ____________ಪುಟದಲ್ಲಿ ನಮೂದಿಸಿದೆ.<br>ವೇತನ ಪತ್ರವನ್ನು ___________ರಂದು ಕಳುಹಿಸಿಕೊಟ್ಟಿದೆ. | ವರ್ಗಾವಣೆಯಾದ/ರಜೆಯಲ್ಲಿ ಹೋಗುವ/ನಿವೃತ್ತಿಯಾಗುವ ಪದಮುಕ್ತ ಅಧಿಕಾರಿ<br>ಸಹಿ ______________________<br>**(ಎಸ್.ರಂಗನಗೌಡ)**<br>**ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಬಿ ಮತ್ತು ಸಿ)**<br>(ದಪ್ಪ ಅಕ್ಷರಗಳಲ್ಲಿ ಹೆಸರು)<br><br>ಪದಗ್ರಾಹಿ ಅಧಿಕಾರಿ<br>ಸಹಿ______________________<br>**(ಮುಬಾರಕ್ ಅಹ್ಮದ್)**<br><br>(ದಪ್ಪ ಅಕ್ಷರಗಳಲ್ಲಿ ಹೆಸರು)<br>ಪದನಾಮ: **ಉಪ ನಿರ್ದೇಶಕರು ಮತ್ತು ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ**<br>ಸ್ಥಳ : ಬೆಂಗಳೂರು<br>ದಿನಾಂಕ: 19.07.2017 |

ಯಾವ ಶಿಲ್ಕುಗಳಿಗೆ ಪ್ರಭಾರ ಸ್ವೀಕರಿಸುವ ಅಧಿಕಾರಿಯ ಜವಾಬ್ದಾರಿ ವಹಿಸಿದ್ದಾನೋ ಆ ಶಿಲ್ಕುಗಳ ಜ್ಞಾಪನ ಪತ್ರ.

ನಗದು ರೂ.-ಇಲ್ಲ- ಖಾಯಂ ಮುಂಗಡ ರೂ. : ಇಲ್ಲ

ಪದಮುಕ್ತ ಅಧಿಕಾರಿ __________

ಪದಗ್ರಾಹಿ ಅಧಿಕಾರಿ ಸಹಿ__________